ಪಿಡಬ್ಲ್ಯೂ: 1

ಸಾಕ್ಷಿಯು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆಗೆ ಒಳಪಟ್ಟಿದ್ದು, ಅವರನ್ನು ಪಿಡಬ್ಲ್ಯೂ-1 ಎಂದು ಪರಿಗಣಿಸಿ, ಇಂದು ದಿನಾಂಕ:07.11.2019 ರಂದು ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ವಾದಿಯ ಪರ ಶ್ರೀ ಕೆ.ಬಿ.ಬಿ ವಕೀಲರಿಂದ:

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

| ಕ್ರ.ಸಂಖ್ಯೆ: | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | 13 ಕರನಿರ್ಧರಣಾ ಪಟ್ಟಿಗಳು | ನಿಪಿ-1 ರಿಂದ 13 |
| 2. | ದಿನಾಂಕ:26.081989 ರ ಮೃತ್ಯು ಪತ್ರದ ದೃಢೀಕೃತ ಪ್ರತಿ | ನಿಪಿ-14 |
| 3. | 6 ಪೋಟೋಗಳು | ನಿಪಿ-15 ರಿಂದ 20 |
| 4. | ದೂದೀಹಳ್ಳಿ ಗ್ರಾಮದ ಸರ್ವೆ ನಂ:2/1 ರ ಪಹಣಿ ಪತ್ರಿಕೆ | ನಿಪಿ-21 |
| 5. | ಅರ್ಜಿ ಸ್ವೀಕೃತಿ ರಶೀದಿ | ನಿಪಿ-22 |
| 6. | ಮ್ಯುಟೇಶನ್ ರಜಿಸ್ಟರ ನಂ:1963 ರ ದೃಢೀಕೃತ ಪ್ರತಿ | ನಿಪಿ-23 |

ಈ ಮೇಲ್ಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು. ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**ಪಾಟೀ ಸವಾಲು:** ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.